ಬಿಡಿಸುವುದು, ಡ್ಯಾನ್ಸ್ ಮಾಡಿಸುವುದು... ನೀವೊಂದು ಕೆಲಸ ಮಾಡಿ. ನಾಳೆ ದೊಡ್ಡ ತಂಙಳ್ ಅವರನ್ನು ಕಂಡು ಒಂದು ಉರುಕ್ಕು ಕಟ್ಟಿಸಿಕೊಂಡು ಬನ್ನಿ."

ತಾಯತ ಕಟ್ಟಿಸಿಕೊಂಡ ಮೇಲೆ ಮಮ್ಮುಮುಕ್ರಿಯ ಮನಸ್ಸು ಇನ್ನಿಲ್ಲದಂತೆ ಶಾಂತವಾಯಿತು. ಈ ಸಂತೋಷ ವಾರ್ತೆಯನ್ನು ಅವರು ಖತೀಬರಿಗೂ ಹೇಳಿದರು. "ಒಳ್ಳೆ ಫಲ ಸಿಕ್ಕಿತು ಉಸ್ತಾದರೇ. ಈಗ ಚಿತ್ರ ಬಿಡಿಸುವ ಯೋಚನೆಯೂ ಬರುವುದಿಲ್ಲ. ಕೈಬೆರಳುಗಳು ಸುಮ್ಮನೇ ತಾಳ ಹಾಕುವುದಿಲ್ಲ. ಬಣ್ಣಗಳ ಕಡೆಗೆ ಕಣ್ಣು ಹೋಗುವುದೇ ಇಲ್ಲ."

ಖತೀಬ್ ನಿಸ್ಸಾರವಾಗಿ ನಕ್ಕರು; ದೊಡ್ಡ ತಂಙಳ್ ಅವರ ತಾಯತ ಎಂದರೆ ಸುಮ್ಮನೇನಾ ಎಂಬರ್ಥದಲ್ಲಿ.

ಆದರೆ, ಸಮಯ ಬಹಳವೇನೂ ಹಿಡಿಯಲಿಲ್ಲ, ಟೆರೇಸಿನ ಮೇಲೆ ಸುಮ್ಮನೇ ನಡೆಯುತ್ತಿದ್ದಾಗ ಅದು ಖತೀಬರ ಕಣ್ಣಿಗೆ ಬಿತ್ತು. ಟೆರೇಸಿನ ಮೇಲೆ ಗಾರೆ ಹಚ್ಚಿದ್ದ ಅರ್ಧ ಗೋಡೆಯೊಂದಿತ್ತು. ಅದರ ಮೇಲೆ ಹಸಿರೆಲೆಗಳು, ಇದ್ದಿಲತುಂಡುಗಳು ಮತ್ತು ಕೆಂಪು ಕಲ್ಲು ಸೇರಿಸಿ ಮಾಡಿದ ಜೀವ ಇರುವ ಚಿತ್ರವೊಂದು ಕ್ರೂರವಾಗಿ ನೋಡುತ್ತಿದೆ. ಕಬ್ಬಿಣದ ಕಂಬಿಗಳನ್ನು ಕಚ್ಚಿ ತುಂಡು ಮಾಡುತ್ತಿರುವ ಹಸಿರು ಬಣ್ಣದ ಸಿಂಹ, ಸಿಂಹದ ಕಣ್ಣುಗಳಿಂದ ರಕ್ತ ಕಣ್ಣೀರು ಹರಿಯುತ್ತಿದೆ.

ಖತೀಬ್ ಗಂಟಲು ಹರಿಯುವಂತೆ ಕೂಗಿದರು:

"ಮಮ್ಮುಮುಕ್ರೀ..."

ಪುರಾತನವಾದ ಕತ್ತಲು ಇನ್ನೂ ತುಂಬಿಕೊಂಡಿರುವ ಆ ಚಿಕ್ಕ ಮನೆಯಲ್ಲಿ ನಿರುದ್ಯೋಗಿ ಮಮ್ಮುಮುಕ್ರಿ ತನ್ನ ಬೆರಳುಗಳನ್ನು ಕಚ್ಚುತ್ತಿದ್ದಾರೆ. ಗೋಡೆಯ ಹಿಂದೆ ಹಸಿದ ಹೊಟ್ಟೆಯೊಂದಿಗೆ ಹೆಂಡತಿ ಮಕ್ಕಳು ನೋಡುತ್ತಾ ನಿಂತಿದ್ದಾರೆ. ಕೆಲಸ ಅಂತ ಬೇರೇನೂ ಗೊತ್ತಿಲ್ಲ. ಸುನ್ನತ್ ಮುಗಿದ ಮರುದಿನದಿಂದ ಉಪ್ಪ ಓದಿಗೆ ಕಳಿಸಿದರು. ಮುಂದೆ ಉಪ್ಪಾಗೆ ಸಹಾಯಕನಾಗಿ ಕೆಲಸ. ಉಪ್ಪ ತೀರಿದ ಮೇಲೆ ಆ ಸ್ಥಾನ ತುಂಬಿ ಮುಕ್ರಿಯ ಕೆಲಸ. ಈಗ ಪ್ರಾಯ ಕೈಮೀರಿ ಹೋಗಿದೆ. ಮದರಸ ಕ್ಲಾಸುಗಳು, ಮಸೀದಿಯಲ್ಲಿ ಮುಕ್ರಿ ಕೆಲಸ, ಇವುಗಳ ನಡುವೆ ತೀರಿ ಹೋದವರ ಹೆಸರಲ್ಲಿ ಯಾಸೀನ್ ಓದು, ದುಆ ಮತ್ತು ಸಿಗುವ ಭಕ್ಷೀಸು... ಬದುಕು ನಿರಾತಂಕವಾಗಿಯೇ ನಡೆಯುತ್ತಿತ್ತಲ್ಲ ಮುಕ್ರಿ.

ನೆನಪಿನಾಳಕ್ಕೆ ಇಳಿದಂತೆ ಮಮ್ಮುಮುಕ್ರಿಯ ಹಲ್ಲುಗಳೂ ಬೆರಳಿನಾಳಕ್ಕೆ ಇಳಿದವು. ಎಲ್ಲಕ್ಕೂ ಕಾರಣ ಈ ಬೆರಳುಗಳು. ರಕ್ತ ಒಸರುವ ತನಕ ಹಲ್ಲುಗಳನ್ನು ಸಡಿಲಿಸಲಿಲ್ಲ. ಕಣ್ಣೀರು ತಡೆಯಲಾಗಲೇ ಇಲ್ಲ. ಅಳು ನಿಂತಾಗ ಎದ್ದು ನಡೆದರು.

ದೊಡ್ಡ ತಂಙಳ್ ಅವರನ್ನು ತಬ್ಬಿಕೊಂಡು ಮಗುವಿನಂತೆ ಅತ್ತರು.

"ತಂಙಳೇ, ನಿಮ್ಮ ಉರುಕ್ಕು ಮೋಸ ಮಾಡಿತು. ನನ್ನ ಕೈಯಲ್ಲಿ ಮತ್ತೆ ಜಿನ್ನ್ ಬಂದು ಕೂತಿದೆ."

ದೊಡ್ಡ ತಂಙಳ್ ಅವರಿಗೆ ಅದಾಗಲೇ ಎಲ್ಲವೂ ಅರ್ಥವಾಗಿತ್ತು. ಆದರೆ, ಹೊರಗಡೆಯಿದ್ದ ಭಕ್ತರ ಸಾಲು ಕಂಡಾಗ ಅವರು ಕೂಡ ಕುಸಿದರು. ನಿಧಾನಕ್ಕೆ ತಂಙಳ್ ಅವರ ಕಂಗಳೂ ತುಂಬಿಕೊಂಡವು.

"ಸಮಾಧಾನ ಮಾಡಿಕೋ ಮಗನೇ... ಎಲ್ಲಾ ಸರಿಯಾಗುತ್ತದೆ. ನೀನು... ನಿನ್ನದು ತುಂಬಾ ಬೇಗ ಆಗಿಬಿಟ್ಟಿತು. ಇದರಲ್ಲಿ ಯಾರದ್ದೂ ತಪ್ಪಿಲ್ಲ. ಹೀಗೆ ಬೇಗನೇ ಆಗಿ ಬಿಡುವ ಕೆಲವು ಜನ್ಮಗಳಿವೆ. ಅವರಿಗೆಲ್ಲ ಭೂಮಿ ಒಂದು ನರಕ. ನೀನು ದುಆ ಮಾಡು."

ಹೊರಗಿನ ಜನಸಂದಣಿ ಗಿಜಿಗುಟ್ಟುತ್ತಿದೆ.

ಮುಕ್ರಿಯ ಬಿಕ್ಕಳಿಕೆಗಳು ಜನರ ಗದ್ದಲದಲ್ಲಿ ನಿಧಾನಕ್ಕೆ ಕ್ಷೀಣಿಸುತ್ತಾ ಮಾಯವಾದವು.

ಇನ್ನೇನು ಬಿದ್ದೇ ಹೋಗುತ್ತದೆ ಎಂಬಂತಿರುವ ಪಕ್ಕಾಸು ನೋಡುತ್ತಾ ಮಲಗಿದ್ದರು ಮಮ್ಮುಮುಕ್ರಿ. ನೋಡಿದಲ್ಲೆಲ್ಲ ಅವರಿಗೆ ರೂಪಗಳು ಕಂಡವು. ಅವುಗಳಲ್ಲೆಲ್ಲ ಅಧ್ಯಾತ್ಮ ಭಾವ.